ದೂರವಾಣಿ ಸಂಖ್ಯೆ: 2419209/2419361
ಫ್ಯಾಕ್ಸ್: 0821-2419363/2419301

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ : 1916

e-mail : registrar@uni-mysore.ac.in
www: uni-mysore.ac.in

ವಿಶ್ವವಿದ್ಯಾನಿಲಯ ಕಾರ್ಯಸೌಧ,
ಕ್ರಾಫರ್ಡ್ ಭವನ, ಮೈಸೂರು-570005

C.D. MANASAGANGOTHRI
UNIVERSITY OF MYSORE, MYSORE
3249
03/10/23

ವಿಷಯ: BSNL ಇವರಿಂದ 01 Gbps ILL ಇಂಟರ್‌ನೆಟ್ Bandwidth ಸಂಪರ್ಕ ಸೇವೆಯನ್ನು ಪಡೆಯಲು ಮಂಜೂರಾತಿ ನೀಡುವ ಬಗ್ಗೆ.

ಉಲ್ಲೇಖ: 1. ವಿ.ವಿ.ಆದೇಶ ಸಂಖ್ಯೆ: ಜಿಎಲ್6/ಇತರೆ/2019-20 ದಿನಾಂಕ: 21ನೇ ಫೆಬ್ರವರಿ 2022
2. ನಿರ್ದೇಶಕರು, ಐ.ಸಿ.ಡಿ., ಗಣಕ ವಿಜ್ಞಾನಅಧ್ಯಯನ ವಿಭಾಗ, ಮಾ.ಗಂ., ಮೈಸೂರುಇವರ ಪತ್ರ ಸಂಖ್ಯೆ:ಎಂ.ಜಿ.ಎಂ/ಐಸಿಡಿ/144/2022-23 ದಿನಾಂಕ 11.01.2023
3. ದಿನಾಂಕ 09-03-2023ರಂದು ಜರುಗಿದ ದರಸಂಧಾನ ಸಭೆಯ ನಡಾವಳಿ.
4. ಮಾನ್ಯ ಕುಲಪತಿಗಳ ಆದೇಶದ ದಿನಾಂಕ 30-09-2023.

ಪ್ರಸ್ತಾವನೆ:

ನಿರ್ದೇಶಕರು, ಐ.ಸಿ.ಡಿ., ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾ.ಗಂ., ಮೈಸೂರು ಇವರ ಕೋರಿಕೆ ಮೇರೆಗೆ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಚಟುವಟಿಕೆಗಳಿಗೆ ಹಾಗೂ ಇನ್ನಿತರ ಆನ್‌ಲೈನ್ ಕೆಲಸ ಕಾರ್ಯಗಳಿಗೆ ಸರ್ಕಾರಿ ಸ್ವಾಮ್ಯದ ಸಂಸ್ಥೆಯಾದ ಬಿ.ಎಸ್.ಎನ್.ಎಲ್, ಮೈಸೂರು ಇವರಿಂದ ಒಂದು ವರ್ಷದ ಅವಧಿಗೆ 01 GBPS ILL ಇಂಟರ್‌ನೆಟ್ ಸಂಪರ್ಕ ಸೇವೆಯನ್ನು ಪಡೆಯಲು ಒಟ್ಟು ಮೊತ್ತ ರೂ.24,49,680-00ಗಳಿಗೆ ದಿನಾಂಕ 21.02.2022ರಂದು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿತ್ತು. ಸದರಿ ಒಂದು ವರ್ಷದ ಅವಧಿಯು 31.03.2023ಕ್ಕೆ ಕೊನೆಗೊಳ್ಳುವುದರಿಂದ, ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಮುಂದಿನ ಒಂದು ವರ್ಷದ ಅವಧಿಗೆ BSNL ಇವರಿಂದ 01Gbps ILL ಇಂಟರ್‌ನೆಟ್ Bandwidth ಸಂಪರ್ಕ ಸೇವೆಯನ್ನು ರೂ.24,49,680-00ಗಳಿಗೆ ಪಡೆಯಲು ಮಂಜೂರಾತಿ ನೀಡಬೇಕೆಂದು ದಿನಾಂಕ 11.01.2023ರಂದು ಕೋರಿರುತ್ತಾರೆ.

ಈಗಾಗಲೇ ವಿಧಿಸಲಾಗಿರುವ ದರವು ಹೆಚ್ಚಾಗಿರುವುದರಿಂದ ರಿಯಾಯಿತಿ ಕೋರಿ ದಿನಾಂಕ 09.03.2023ರಂದು ಮಾನ್ಯ ಕುಲಪತಿಗಳು ಬಿ.ಎಸ್.ಎನ್.ಎಲ್ ಹಾಗೂ ವಿಶ್ವವಿದ್ಯಾನಿಲಯದ ಅಧಿಕಾರಿಗಳ ಸಮಕ್ಷಮದಲ್ಲಿ ದರಸಂಧಾನ ಸಭೆಯನ್ನು ನಡೆಸಿ, ಮೈಸೂರು ವಿಶ್ವವಿದ್ಯಾನಿಲಯವು ಶೈಕ್ಷಣಿಕ ಸಂಸ್ಥೆಯಾಗಿರುವುದರಿಂದ ವಿದ್ಯಾರ್ಥಿಗಳ, ಸಂಶೋಧಕರುಗಳು ಹಾಗೂ ಅಧ್ಯಾಪಕರುಗಳ ಶೈಕ್ಷಣಿಕ ಚಟುವಟಿಕೆಗಳಿಗೆ ಇಂಟರ್‌ನೆಟ್‌ಅನ್ನು ಬಳಸುತ್ತಿರುವುದರಿಂದ ಸದರಿ ಮೊತ್ತಕ್ಕೆ ಶೇ.50 ರಷ್ಟು ರಿಯಾಯಿತಿಯನ್ನು ನೀಡುವಂತೆ ಸಭೆಯಲ್ಲಿ ಹಾಜರಿದ್ದ ಬಿಎಸ್‌ಎನ್‌ಎಲ್ ಸಂಸ್ಥೆಯ ಅಧಿಕಾರಿಗಳನ್ನು ಕೋರಲಾಯಿತು. ಆದರೆ ಸದರಿ ಅಧಿಕಾರಿಗಳು ಬಿಎಸ್‌ಎನ್‌ಎಲ್.ನ ಮೇಲಾಧಿಕಾರಿಗಳೊಂದಿಗೆ ಚರ್ಚಿಸಿ ಶೇ. 10 ರಷ್ಟು ರಿಯಾಯಿತಿ ನೀಡುವುದಾಗಿ ತಿಳಿಸಿದರು. ಈ ಬಗ್ಗೆ ಜನರಲ್ ಮ್ಯಾನೇಜರ್ ಬಿ.ಎಸ್.ಎನ್.ಎಲ್ ಇವರಿಗೆ ಹೆಚ್ಚಿನ ರಿಯಾಯಿತಿ ಕೋರಿ ದಿನಾಂಕ 13.03.2023ರಂದು ಪತ್ರ ಬರೆಯಲಾಗಿತ್ತು. ಅಂತಿಮವಾಗಿ ಬಿ.ಎಸ್.ಎನ್.ಎಲ್ ಸಂಸ್ಥೆಯು ರಿಯಾಯಿತಿ ನೀಡಿ ರೂ. 19,72,960-00ಗಳಿಗೆ ಹುಂಡಿಯನ್ನು ಸಲ್ಲಿಸಿ ದಿನಾಂಕ: 01-04-2023ರಿಂದಲೇ ಸೇವೆಯನ್ನು ನೀಡುತ್ತಿರುತ್ತಾರೆ. ಈ ಹಿನ್ನೆಲೆಯಲ್ಲಿ ಒಂದು ವರ್ಷದ ಅವಧಿಗೆ ದಿನಾಂಕ 01-04-2023ರಿಂದ ಅನ್ವಯವಾಗುವಂತೆ ಘಟನೋತ್ತರ ಮಂಜೂರಾತಿ ನೀಡಬೇಕಾಗಿರುತ್ತದೆ. ಸದರಿ ಮೊತ್ತಕ್ಕೆ ಮಾನ್ಯ ಕುಲಪತಿಗಳು ದಿನಾಂಕ 30.09.2023ರಂದು ಅನುಮೋದನೆ ನೀಡಿರುತ್ತಾರೆ. ಅದರಂತೆ ಈ ಕೆಳಕಂಡ ಆದೇಶ.

******

## ಆದೇಶ ಸಂಖ್ಯೆ: ಜಿಎಲ್.6/28/2021-22 ದಿನಾಂಕ: 30ನೇ ಸೆಪ್ಟೆಂಬರ್ 2023

ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, ನಿರ್ದೇಶಕರು, ಐ.ಸಿ.ಡಿ., ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರಿಗೆ ವಿಶ್ವವಿದ್ಯಾನಿಲಯದ ಆನ್‌ಲೈನ್ ಮೀಟಿಂಗ್, ವೆಬಿನಾರ್ ಹಾಗೂ ವಿದ್ಯಾರ್ಥಿಗಳ, ಸಂಶೋಧಕರುಗಳ ಮತ್ತು ಅಧ್ಯಾಪಕರುಗಳ ಶೈಕ್ಷಣಿಕ ಚಟುವಟಿಕೆಗಳಿಗೆ ಮತ್ತು

ವಿಶ್ವವಿದ್ಯಾನಿಲಯದ ಇನ್ನಿತರ ಆನ್‌ಲೈನ್ ಕೆಲಸ ಕಾರ್ಯಗಳಿಗಾಗಿ ಸರ್ಕಾರಿ ಸ್ವಾಮ್ಯದ ಸಂಸ್ಥೆಯಾದ ಬಿ.ಎಸ್.ಎನ್.ಎಲ್., ಜಯಲಕ್ಷ್ಮೀಪುರಂ, ಮೈಸೂರು ಇವರಿಂದ ದಿನಾಂಕ 01-04-2023ರಿಂದ ಪೂರ್ವಾನ್ವಯವಾಗಿ ಜಾರಿಗೆ ಬಂದಂತೆ ಒಂದು ವರ್ಷದ ಅವಧಿಗೆ 01 GBPS ILL ಇಂಟರ್‌ನೆಟ್ Bandwidth ಸಂಪರ್ಕ ಸೇವೆಯನ್ನು ನಿಯಮಾನುಸಾರ ಒಟ್ಟು ರೂ. 19,72,960-00 (ಹತ್ತೊಂಭತ್ತು ಲಕ್ಷದ ಎಪ್ಪತ್ತೆರಡು ಸಾವಿರದ ಒಂಭತ್ತು ನೂರು ಅರವತ್ತು ರೂಪಾಯಿಗಳು ಮಾತ್ರ)ಗಳ ವೆಚ್ಚದಲ್ಲಿ ಸೇವೆಯನ್ನು ಪಡೆಯಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ಈ ಸಂಬಂಧದ ವೆಚ್ಚವನ್ನು **2023-24ನೇ** ಸಾಲಿನ **"ಐ.ಐ.ಡಿ.ಎಫ್"** ಶೀರ್ಷಿಕೆಯಿಂದ ಭರಿಸತಕ್ಕದ್ದು.

ಆದೇಶದ ಮೇರೆಗೆ,

ಕುಲಸಚಿವ

ಕುಲಸಚಿವ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಇವರಿಗೆ:

1. ನಿರ್ದೇಶಕರು, ಐ.ಸಿ.ಡಿ., ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು
2. ಅಸಿಸ್ಟೆಂಟ್ ಜನರಲ್ ಮೆನೇಜರ್, ಬಿಎಸ್‌ಎನ್‌ಎಲ್, ಜಯಲಕ್ಷ್ಮೀಪುರಂ, ಮೈಸೂರು
3. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಪರೀಕ್ಷಾ ಭವನಕಟ್ಟಡ, ಕ್ರಾಫರ್ಡ್ ಭವನಆವರಣ, ಮೈಸೂರು.
5. ಕುಲಪತಿ/ಕುಲಸಚಿವ/ಕುಲಸಚಿವ(ಪ), ಹಣಕಾಸು ಅಧಿಕಾರಿಗಳ ಆಪ್ತಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
6. ಕಛೇರಿ ಪ್ರತಿ

-DRAFT.docx-GL-6/1

UNIVERSITY OF MYSORE
(Accredited by NAAC with "A" Grade)
(NIRF- 2022 Ranked 33 in University Category & 54 in Overall Category)
INFORMATION AND COMMUNICATION DIVISION
Manasagangotri, Mysuru - 570006
Phone No : 0821-2419556
Email: icd@uni-mysore.ac.in

No. MGM/ICD/ 83/2023-2024

Dated: 05 .10.2023

## Service Order

To,

The General Manager
Bharath Sanchar Nigam (BSNL)
Jayalakshmipura,
Mysore-570 012.

Dear Sir,

Sub: Supply of 1Gbps Internet Bandwidth to University of Mysore, Mysuru Campus –Reg
Ref: GL6/28/2021-22 Dated: 30.09.2023.

With reference to above, I am happy to inform you that the University of Mysore has acceted and approved for Internet Service of 1Gbps from your company at negotiated price of Rs 19,72,960/-(Rupees Ninteen Lakh Seventy Two Thousand and Nine Sixty Only) with effect from 1st April 2023.

Hence, I request you to make necessary arrangements to establish the 1Gbps Internet Bandwidth connectivity to the University Of Mysore,Mysuru at the erliest.

Thanking you.

5/10/23

Sr. General Manager Telecom
B S N L

Your's faithfully

4/10/2023
Director

DIRECTOR
Information and Communication Division
DOS in Computer Science
M.G.M. University of Mysore

O/c